

## ಚಿರಯುವಕ ದತ್ತಣ್ಣ!

ದತ್ತಣ್ಣ ಎಂದ ಕೂಡಲೇ ನೆನಪಿಗೆ ಬರುವುದು – ಜೀವನದ ಸಂಘರ್ಷದಲ್ಲಿ ದಣಿದ ವೃದ್ಧನೊಬ್ಬನ ಪಾತ್ರ. ಅದು ತಂದೆಯ ಪಾತ್ರವಾಗಿರಬಹುದು, ನಿವೃತ್ತ ಅಧಿಕಾರಿಯ ಪಾತ್ರವಾಗಿರಬಹುದು, ಇಲ್ಲವೇ ಸಹಾಯಹಸ್ತ ಚಾಚುವ ಆಪ್ತಮಿತ್ರನ ಪಾತ್ರವಿರಬಹುದು. ಇಂಥ ಪಾತ್ರಗಳಲ್ಲಿ ನಟಿಸುತ್ತಾ ನಟಿಸುತ್ತಾ ಎಚ್.ಜಿ. ದತ್ತಾತ್ರೇಯ ಎನ್ನುವ ಪ್ರತಿಭಾವಂತ ಕಲಾವಿದ ಒಂದು ಬಗೆಯ ಏಕತಾನತೆಯ ಚೌಕಟ್ಟಿನಲ್ಲಿ ಗುರ್ತಿಸಿಕೊಂಡಿದ್ದರಲ್ಲಿ ನಮ್ಮ ಪ್ರಯೋಗಶೀಲ ನಿರ್ದೇಶಕರ ಕೊಡುಗೆ ದೊಡ್ಡದಿದೆ. ಈಗ, ವಿಜಯಪ್ರಸಾದ್‌ರ 'ನೀರ್‌ದೋಸೆ' ಸಿನಿಮಾ ದತ್ತಣ್ಣರನ್ನು ಕಮರ್ಷಿಯಲ್ ಚಿತ್ರಗಳ ಬೆಳಕಿಗೆ ಕರೆತಂದಿದೆ.

'ನೀರ್‌ದೋಸೆ' ಚಿತ್ರದಲ್ಲಿ ಅವರದು ಒಂಟಿ ಬ್ರಹ್ಮಚಾರಿಯ ಪಾತ್ರ. ಜ್ವರಕ್ಕೆ ಔಷಧಿ ತೆಗೆದುಕೊಳ್ಳುವಷ್ಟೇ ಸಹಜವಾಗಿ, ಮಾತ್ರೆ ನುಂಗುವ ಮೂಲಕ ವಾರದಲ್ಲಿ ಎರಡು ಮೂರು ಸಲ ಸಂಸಾರಿಯುವ ಚಪಲಚಿತ್ತನ ಪಾತ್ರ ಅವರದು. ಬದುಕನ್ನು ಅಪಾರವಾಗಿ ಪ್ರೀತಿಸುವ ಹಾಗೂ ಇತರರ ಬದುಕನ್ನು ಗೌರವಿಸುವ ಉದಾತ್ತ ವ್ಯಕ್ತಿತ್ವದ ಪಾತ್ರದಲ್ಲಿ ದತ್ತಣ್ಣನ ನಟನೆಯನ್ನು ನೋಡುವುದು ಹಬ್ಬದ ಅನುಭವ ನೀಡುವಂತಿದೆ. ಒಮ್ಮೆ ಪೋಲಿ ಮುದುಕನಾಗಿ, ಕ್ಷಣಮಾತ್ರದಲ್ಲೇ ಹಿರಿತನದ ಪ್ರೌಢನಾಗಿ ದತ್ತಣ್ಣ ರೂಪಾಂತರಗೊಳ್ಳುವ ಬಗೆಯೊಂದು ಸೋಜಿಗ.

ನಾಯಕಿ ಬದಲಾದುದರಿಂದ 'ನೀರ್‌ದೋಸೆ' ಪೂರ್ಣಗೊಳ್ಳುವುದೇ ಕಷ್ಟ ಎನ್ನುವಂತಾಗಿತ್ತು. ನಿರ್ದೇಶಕ ವಿಜಯಪ್ರಸಾದ್‌ರ ಕಷ್ಟದ ದಿನಗಳಲ್ಲಿ ಅವರ ಉತ್ಸಾಹ ಕಡಿಮೆಯಾಗದಂತೆ ನೋಡಿಕೊಂಡವರಲ್ಲಿ ದತ್ತಣ್ಣ ಕೂಡ ಒಬ್ಬರು. ಯುವ ನಿರ್ದೇಶಕನ ಬಗ್ಗೆ ಹಿರಿಯ ಕಲಾವಿದನೊಬ್ಬ ತೋರಿಸಬಹುದಾದ ಮಮತೆಯ ರೂಪದಲ್ಲೂ ದತ್ತಣ್ಣ ಮುಖ್ಯರೆನ್ನಿಸುತ್ತಾರೆ.




## 'ಗೋಲಿಸೋಡ'ಕ್ಕೆ ರಾಗಿಣಿ ರಂಗು

'ಗೋಲಿಸೋಡ' ತಮಿಳಿನಲ್ಲಿ ಸೂಪರ್ ಹಿಟ್ ಆಗಿದ್ದ ಸಿನಿಮಾ. ಯುವ ನಿರ್ದೇಶಕ ರಘುಜಯ 'ಗೋಲಿಸೋಡ'ವನ್ನು ಅದೇ ಶೀರ್ಷಿಕೆಯಲ್ಲಿ ಕನ್ನಡಕ್ಕೆ ರೀಮೇಕ್ ಮಾಡಿದ್ದಾರೆ. ಅಲ್ಲಿನ ಗೆಲುವು ಇಲ್ಲೂ ಪುನರಾವರ್ತನೆಯಾಗುವ ನಿರೀಕ್ಷೆ ಚಿತ್ರತಂಡದ್ದು.

ಅನಾಥ ಹುಡುಗರ ತವಕತಲ್ಲಣಗಳನ್ನು ಒಳಗೊಂಡಿದ್ದ 'ಗೋಲಿಸೋಡ' ವಿಭಿನ್ನ ಕಥೆಯ ಮೂಲಕ ಸಹೃದಯರ ಗಮನ ಸೆಳೆದಿತ್ತು. ಕನ್ನಡದಲ್ಲಿ ಕೂಡ ಸಿನಿಮಾ ಪರಿಣಾಮಕಾರಿಯಾಗಿ ಮೂಡಿಬಂದಿದ್ದು, ಚಿತ್ರ ಯುವಜನರ ಮೆಚ್ಚುಗೆ ಗಳಿಸಲಿದೆ ಎನ್ನುವ ವಿಶ್ವಾಸ ನಿರ್ದೇಶಕರದ್ದು. ಈ ಸಿನಿಮಾದಲ್ಲಿ ಬಹುತೇಕ ಹೊಸಪ್ರತಿಭೆಗಳೇ ಕಾರ್ಯನಿರ್ವಹಿಸಿರುವುದು ವಿಶೇಷ.

ರಾಗಿಣಿ ಅವರು ವಿಶೇಷ ಗೀತೆಯೊಂದಕ್ಕೆ ಹೆಜ್ಜೆಹಾಕುವ ಮೂಲಕ 'ಗೋಲಿಸೋಡ'ದ ಗ್ಲಾಮರ್ ಹೆಚ್ಚಿಸಿದ್ದಾರೆ. ಬೆಂಗಳೂರಿನ ಸಿಟಿ ಮಾರ್ಕೆಟ್‌ನ ಪರಿಸರದಲ್ಲಿ ಅವರು ಹಾಡಿ ಕುಣಿದಿದ್ದಾರೆ. ರಾಗಿಣಿ ಅವರಿಗೆ ಜೊತೆಯಾಗಿ ಸಾಧು ಕೋಕಿಲಾ ಅವರು ಹೆಜ್ಜೆಹಾಕಿದ್ದಾರೆ. ಈ ಹಾಡಿನ ಚಿತ್ರೀಕರಣದ ನೆಪದಲ್ಲಿ ರಾಗಿಣಿ ಮಾರುಕಟ್ಟೆಯಲ್ಲೊಂದು ಸುತ್ತುಹಾಕಿ, ಶಾಪಿಂಗ್ ಕೂಡ ಮಾಡಿದ್ದಾರಂತೆ. ಲಹರಿ ವೇಲು ಅವರು ಕೂಡ ಚಿತ್ರದ ಮುಖ್ಯಪಾತ್ರವೊಂದರಲ್ಲಿ ನಟಿಸಿದ್ದಾರೆ. ಈ ಅನುಭವದಿಂದ ಉತ್ತೇಜಿತರಾಗಿರುವ ಅವರು ಮುಂದಿನ ದಿನಗಳಲ್ಲೂ ನಟನೆಯನ್ನು ಮುಂದುವರಿಸುವ ಉತ್ಸಾಹದಲ್ಲಿದ್ದಾರೆ.

ನಟಿ ತಾರಾ ಅವರು ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದು, 'ಈ ಪಾತ್ರ ಸಿನಿಮಾದ ಹೈಲೈಟ್‌ಗಳಲ್ಲಿ ಒಂದಾಗಲಿದೆ. ಹಾಗೆಯೇ ರಾಮು ಅವರ ಛಾಯಾಗ್ರಹಣವೂ ಸೊಗಸಾಗಿದೆ' ಎನ್ನುವುದು ರಘುಜಯ ಅನಿಸಿಕೆ. ಮಧುಸೂದನ್, ಡ್ಯಾನಿ ಕುಟ್ಟಪ್ಪ ಹಾಗೂ ಶೋಭರಾಜ್ ತಾರಾಗಣದಲ್ಲಿರುವ ಪ್ರಮುಖರು.